ರಾಮ್ ರಹೀಮ್ ಬಾಬಾ ಭಕ್ತನಂತೆ. ಒಮ್ಮೆ ಆತನ ಜೊತೆ ಡೇರಾ ಆಶ್ರಮಕ್ಕೆ ಹೋದವಳು ಅಲ್ಲೇ ನೆಲೆಗೊಂಡುಬಿಟ್ಟಳಂತೆ. ಡೇರಾ ಆಶ್ರಮದ ಪರಿಚಾರಕಿಯಾದಳಂತೆ. ಅನುರೂಪ್ ಮೆನನನೊಂದಿಗೆ ಮದುವೆಯೂ ಆದಳಂತೆ. ಆದರೆ ಮದುವೆಯಾದ ಎರಡು ವರ್ಷಗಳಲ್ಲೇ ಅನುರೂಪ್ ಮೆನನ್ ದೆಹಲಿಯಲ್ಲಿ ಹಾರ್ಟ್ ಅಟ್ಯಾಕ್ ಆಗಿ ತೀರಿಹೋದರಂತೆ. ಭಗವಾನ್ ಕುಟ್ಟಿ ಮುಂಬಯಿ ಬಿಟ್ಟು ಹಿಂದಕ್ಕೆ ಬರುವಾಗ ಡೇರಾ ಆಶ್ರಮಕ್ಕೆ ಹೋಗಿ ಆರು ತಿಂಗಳು ಅಲ್ಲೆ ಸೇವೆ ಮಾಡಿಕೊಂಡು ಇದ್ದಾಗ, ಅಲ್ಲಿ ಭಗವಾನ್ ಕುಟ್ಟಿ ಮತ್ತು ಸಿಂಧು ಮೆನನ್ ಇಬ್ಬರಿಗೂ ಪರಿಚಯವಾಗಿ ಒಂದು ದಿನ ಯಾವುದೋ ಕೆಲಸಕ್ಕೆ ದಿಲ್ಲಿಗೆ ಹೋಗಿ ಬರುತ್ತೇವೆಂದು ಹೇಳಿ ಆಶ್ರಮ ಬಿಟ್ಟವರು ಬಂದು ಸೇರಿದ್ದು ಇಲ್ಲಿಗೆ. ಚಿಕ್ಕಂದಿನಲ್ಲೆ ಸಿಂಧು ಡ್ಯಾನ್ಸ್ ಕಲಿತಿದ್ದಳಂತೆ. ಡೇರಾ ಆಶ್ರಮಕ್ಕೆ ವಿವಿಐಪಿಗಳು ಬಂದಾಗ ಸಿಂಧು ಡ್ಯಾನ್ಸ್ ಪ್ರೋಗ್ರಾಂ ತಪ್ಪದೆ ಇರುತ್ತಿತ್ತಂತೆ. ಅವಳಿಗೆ ಡ್ಯಾನ್ಸ್ ಒಂದು ವ್ಯಾಧಿಯೇ ಆಗಿಬಿಟ್ಟಿದೆ. ಅಗತ್ಯ ಬಿದ್ದಾಗ ನರ್ಸ್ ಸೇವೆಯೂ ಮಾಡುತ್ತಾಳೆ. ತುಂಬಾ ಸೆಕ್ಯುಲರ್ ಹೆಣ್ಣು. ನಮ್ಮ ಭಗವಾನ್ ಕುಟ್ಟಿ ಮತ್ತು ಸಿಂಧು ಮೆನನ್ ಗಂಡ ಹೆಂಡತಿಯರಂತೆಯೇ ಇದ್ದಾರೆ. ಆದರೆ ಭಗವಾನ್ ಕುಟ್ಟಿ ಆ ಕಡೆ ಗಂಡೂ ಅಲ್ಲ, ಈ ಕಡೆ ಹೆಣ್ಣೂ ಅಲ್ಲ. ಇಬ್ಬರಿಗೂ ಮಕ್ಕಳಿಲ್ಲ. ಡ್ಯಾನ್ಸ್ ಪ್ರೋಗ್ರಾಂಗೆಂದು ಮೂರು ವರ್ಷಗಳಲ್ಲಿ ಸಿಂಧು ಮೆನನ್ ನಾಲ್ಕು ಸಾರಿ ವರ್ಲ್ಡ್ ಟೂರ್ ಮಾಡಿ ಬಂದಿದ್ದಾಳೆ. ಅಪ್ಪನ, ಕೆ.ಎಮ್. ನಯ್ಯಾರ್ ಅಂಕಲ್‌ರ ಅನೇಕ ಸ್ನೇಹಿತರು ಲಕ್ಷಾಂತರ ರೂಪಾಯಿಗಳನ್ನು ಪ್ರೈಸ್, ಗಿಫ್ಟ್‌ಗಳ ಮೂಲಕ ಸಿಂಧು ಮೆನನ್ ಅಕೌಂಟಿಗೆ ಹಾಕಿದ್ದಾರೆ. ಎರಡು ತಿಂಗಳ ಹಿಂದೆ ಇನ್‌ಕಮ್ ಟ್ಯಾಕ್ಸ್‌ನವರೂ ಬಂದು ಏನೂ ಸಿಗದೆ ವಾಪಸ್ಸು ಹೋಗಿದ್ದರು!' ಭಗವಾನ್ ಕುಟ್ಟಿ ಮತ್ತು ಸಿಂಧು ಮೆನನಳ ಒಂದು ರೀತಿಯ ಸಿನೀಮಿಯ ಇತಿಹಾಸವನ್ನು ಬಿಚ್ಚಿಟ್ಟಿದ್ದಳು ಅರುಂಧತಿ!

ಸಿಂಧು ಮೆನನ್ ಅರ್ಧ ಗಂಟೆ ಕಾಲ ಒಂದಿಷ್ಟೂ ಆಯಾಸಗೊಳ್ಳದೆ ಅದ್ಭುತವಾದ ನೃತ್ಯವನ್ನು ಮಾಡಿದ್ದಳು. ಬಿಲ್ಲಿನಂತೆ ಬಾಗುತ್ತಿದ್ದ ಅವಳ ಮೈ, ಮಿಂಚಿನಂತೆ ಹೊರಳಾಡುತ್ತಿದ್ದ ಕಣ್ಣುಗಳು ...ಓಹ್! ಅಂಥ ಅದ್ಭುತವಾದ, ರೋಮಾಂಚನಗೊಳಿಸುವ ನೃತ್ಯವನ್ನು ಹಿಂದೆಂದೂ ನೋಡಿದ್ದ ನೆನಪಿರಲಿಲ್ಲ ನನಗೆ. ನೃತ್ಯ ಮುಗಿದ ಮೇಲೆ ಸ್ಟೇಜ್ ಇಳಿದು ಬಂದಾಗ ಅವಳ ಕೈಕುಲುಕಿ 'ರಿಯಲಿ ಫೆಂಟಾಸ್ಟಿಕ್ ಡ್ಯಾನ್ಸ್ ಪರ್ಫಾಮೆನ್ಸ್' ಎಂದು ಮೆಚ್ಚುಗೆ ಸೂಚಿಸಿದ್ದೆ.

'ಥ್ಯಾಂಕ್ಸ್' ಅವಳು ನಕ್ಕಾಗ ಹಲ್ಲುಗಳು ನಕ್ಷತ್ರಗಳಂತೆ ಮಿನುಗಿದ್ದವು. 'ಸಿಂಧು ಬ್ರೇಕ್ ಇಲ್ಲದೆ ಎರಡು ಗಂಟೆಗಳ ಕಾಲ ನೃತ್ಯ ಮಾಡಬಲ್ಲಳು ಒಂದಿಷ್ಟೂ ಆಯಾಸಗೊಳ್ಳದೆ' ಮಾತು ಸೇರಿಸಿದ್ದರು ಮಾಧವನ್ ಪಿಳ್ಳೈ. ನೃತ್ಯ ಮುಗಿಸಿ ಹಿಂತಿರುಗಿದಾಗ ಭಗವಾನ್ ಕುಟ್ಟಿ ಊಟವನ್ನು ರೆಡಿ ಮಾಡಿದ್ದ. ರಿವಾಲ್ವಿಂಗ್ ಡೈನಿಂಗ್ ಟೇಬಲ್ ಮೇಲೆ ವಿದೇಶಿ ವಿಸ್ಕಿ, ವೈನ್ ಬಾಟಲಿಗಳು ಅಲಂಕೃತಗೊಂಡಿದ್ದವು. 'ಏನು ತಗೋತಿರಾ ವಿಸ್ಕಿ, ವೈನ್ ಅಥವಾ ಬಿಯರ್?' ಡೈನಿಂಗ್ ಟೇಬಲ್ ಮುಂದೆ ಕುಳಿತು ಕೇಳಿದ್ದರು ಮಾಧವನ್ ಪಿಳ್ಳೈ.

'ಡ್ರಿಂಕ್ಸ್ ಬಗ್ಗೆ ಅಂಥಾ ಕ್ರೇಜ್ ನನಗೇನೂ ಇಲ್ಲ. ಆದರೂ ಎರಡು ಪೆಗ್ ವೈನ್ ಕುಡಿಯಬಹುದು' ಎಂದಿದ್ದೆ ನಾನು. ಮಾಧವನ್ ಪಿಳ್ಳೈ ವಿಸ್ಕಿ ಕುಡಿದಿದ್ದರು. ವೈನ್‌ಗೆ ಐಸ್ ಬೆರೆಸಿದ ಗ್ಲಾಸನ್ನು ನನ್ನ ಮುಂದಿಟ್ಟಿದ್ದ ಭಗವಾನ್ ಕುಟ್ಟಿ. ವೈನ್ ತುಂಬಾ ರುಚಿಯಾಗಿತ್ತು. ನೆಂಚಿಕೊಳ್ಳಲು ಮಾಡಿಟ್ಟಿದ್ದ ಬಿಸಿಬಿಸಿ ವಡೆ, ಮೂರು ವೆರೈಟಿ ಫಿಶ್ ಫ್ರೈಗಳು ವೈನ್ ರುಚಿಯನ್ನು ಇಮ್ಮಡಿಗೊಳಿಸಿದ್ದವು. ಅರುಂಧತಿ ಪಿಳ್ಳೈ, ಸಿಂಧು ಮೆನನ್ ಕೂಡಾ ಊಟಕ್ಕೆಂದು ಟೇಬಲ್ ಸೇರಿದ್ದರು. ಇಬ್ಬರೂ ಎಳನೀರಿಗೆ ನಿಂಬೆ ಹಣ್ಣು ಬೆರೆಸಿ ಕುಡಿಯುತ್ತಿದ್ದರು.

'ಮನುಷ್ಯನ ದೇಹ ಹೊರಕ್ಕೆ ಘನ ವಸ್ತುವಿನಂತೆ ಕಾಣುತ್ತಿದ್ದರೂ ಅದಕ್ಕೆ ಲಿಕ್ವಿಡ್‌ನ ಅವಶ್ಯಕತೆ ತೀರಾ ಅನಿವಾರ್ಯ', ಮಾಧವನ್ ಕುಟ್ಟಿ ವಿಸ್ಕಿಯ ಸುದೀರ್ಘ ಗುಟುಕನ್ನು ಗುಟುಕರಿಸುತ್ತಾ ಹೇಳಿದ್ದರು. 'ಹೌದು, ರಕ್ತ ಕೂಡ ಲಿಕ್ವಿಡ್ ಫಾರ್ಮ್ ಅಲ್ವಾ?' ಡಾಕ್ಟರ್ ಅರುಂಧತಿ ಪಿಳ್ಳೈ ನಕ್ಕಿದ್ದಳು. 'ಮತ್ತು ಸಂಪತ್ತು ಕೂಡ ಲಿಕ್ವಿಡ್ ಕ್ಯಾಶ್ ಫಾರ್ಮ್‌ನಲ್ಲಿದ್ದರೆ ಉಪಯೋಗ ಜಾಸ್ತಿ...' ನಾನು ಮಾತು ಸೇರಿಸಿದ್ದೆ. ಎಂಥಾ ಶ್ರೀಮಂತನಿಗೇ ಆಗಲಿ, ಬಡವನಿಗೆ ಆಗಲಿ ಥಟ್ಟನೆ ಉಪಯೋಗಕ್ಕೆ, ಅನುಭೋಗಕ್ಕೆ ಬರುವುದು ಬಳಿಯಿರುವ ಲಿಕ್ವಿಡ್ ಕ್ಯಾಶ್ ಮಾತ್ರವೇ.

'ಆಹಾರವನ್ನು ಬಿಟ್ಟರೆ ನೀರು, ಲಿಕ್ಕರ್ ಮತ್ತು ಮೆಡಿಸಿನ್ ಇವೊತ್ತು ಅತ್ಯಂತವಾಗಿ ಬಿಕರಿಯಾಗುತ್ತಿರುವ ಸರಕುಗಳು' ಮಾಧವನ್ ಪಿಳ್ಳೈ ಇನ್ನೊಂದು ಪೆಗ್ ವಿಸ್ಕಿ ಬಗ್ಗಿಸಿಕೊಂಡು ಹೇಳಿದ್ದರು. ಪ್ಲೇಟುಗಳಿಗೆ ಬಿಸಿ ಬಿಸಿ ಕಾಣೆ ಫಿಶ್ ಫ್ರೈ ಬಡಿಸುತ್ತಾ ಭಗವಾನ್ ಕುಟ್ಟಿ, 'ನನಗೆ ತಿಳಿದಂತೆ ಮನುಷ್ಯನಿಗಿಂತಲೂ ದೊಡ್ಡ ಸರಕು ಯಾವುದೂ ಇಲ್ಲ ಅನ್ನಿಸುತ್ತದೆ' ಎಂದು ನಕ್ಕಿದ್ದ. 'ಭಗವಾನ್ ಕುಟ್ಟಿ ನೀನು ತುಂಬಾ ಬುದ್ಧಿವಂತನಾಗ್ತಿದ್ದೀಯ' ಎಂದ ಮಾಧವನ್ ಪಿಳ್ಳೈ ನನ್ನ ಕಡೆ ತಿರುಗಿ, 'ನಮ್ಮ ಭಗವಾನ್ ದಿನಕ್ಕೆ ಅರ್ಧ ಬಾಟಲ್ ವಿಸ್ಕಿಯಾದರೂ ಖಾಲಿ ಮಾಡುತ್ತಾನೆ. ಬಾಯಲ್ಲಿ ವಿಸ್ಕಿಯ ಘಮಲು ಇಲ್ಲದೆ ಹೋದರೆ ಮಂಕಾಗಿಬಿಡುತ್ತಾನೆ, ಏನು ಮಾಡಬೇಕೆಂದು ತೋಚುವುದಿಲ್ಲ. ವಿಸ್ಕಿ ಕರುಳು ಸೇರುತ್ತಿದ್ದಂತೆ ಇವನ ಮೆದುಳು ಪಾದರಸದಂತೆ ಕೆಲಸ ಮಾಡುತ್ತದೆ. ಇವನು ಹೀಗೆ ನಿರಂತರವಾಗಿ ಡ್ರಿಂಕ್ಸ್ ಮಾಡಿದರೂ ಅವನ ಆರೋಗ್ಯ ಒಂದು ಚೂರೂ ಕೆಟ್ಟಿಲ್ಲ. ರಬ್ಬರ್ ತೋಟದಲ್ಲಿ ಬೆಳೆಯುವ ಯಾವ ಯಾವುದೋ ಬಳ್ಳಿಗಳ ಎಲೆಗಳನ್ನು ಆಡು ತಿನ್ನುವಂತೆ ಕಿತ್ತು ತಿನ್ನುತ್ತಾನೆ. ಇನ್ನು ಈ ಎಪ್ಪತ್ತರ ಹರೆಯದಲ್ಲೂ ಇಬ್ಬರು ಯುವಕರು ಸೇವಿಸುವಷ್ಟು ಆಹಾರವನ್ನು ತಿಂದು ಅರಗಿಸಿಕೊಳ್ಳುತ್ತಾನೆ. ಅಷ್ಟು ಗಟ್ಟಿಯಾಗಿವೆ ಭಗವಾನ್ ಕುಟ್ಟಿಯ ಕರುಳು...' ಮಾಧವನ್ ಪಿಳ್ಳೈ ಹೇಳುತ್ತಿದ್ದರೆ ಭಗವಾನ್ ಕುಟ್ಟಿಯ ಮುಖದಲ್ಲಿ ಮಂದಹಾಸ ತುಂಬಿ ತುಳುಕಾಡುತ್ತಿತ್ತು. ಡ್ರಿಂಕ್ಸ್ ಮುಗಿದಿತ್ತು. ನಾನು ಮೂರು ಪೆಗ್ ವೈನ್ ತೆಗೆದುಕೊಂಡಿದ್ದೆ. ಎಲ್ಲರಿಗೂ ಬಿಸಿಬಿಸಿ ಫಿಶ್ ಕರಿ, ರೈಸ್ ಬಡಿಸಿದ್ದ ಭಗವಾನ್ ಕುಟ್ಟಿ. ಫಿಶ್ ಕರಿಯನ್ನು ಸ್ಪೂನಿನಲ್ಲಿ ಬಾಯಿಗೆ ಎಳೆದುಕೊಂಡು ನನ್ನ ಕಡೆ ತಿರುಗಿ,

'ಭಾಸ್ಕರ್ ರಾವ್ ಅಂತ ಕಮ್ಯುನಿಸ್ಟ್ ಲೀಡರ್ ನಿಮ್ಮ ಬೆಂಗಳೂರಿನವರೇ. ಎಮರ್ಜೆನ್ಸಿ ಟೈಮಲ್ಲಿ ಅಂಡರ್ ಗ್ರೌಂಡ್ ಆಗಿ ಇಲ್ಲಿಗೆ ಬಂದಿದ್ದರು. ಒಂದು ತಿಂಗಳು ಕಾಲ ನಮ್ಮಲ್ಲೇ ಇದ್ದರು. ಆಗ ಡಿಗ್ರಿ ಸೆಕೆಂಡ್ ಇಯರ್‌ನಲ್ಲಿ ಓದ್ತಾ ಇದ್ರಂತೆ. ಪೊಲೀಸರಿಗೆ ಹೇಗೋ ಅವರ ಪತ್ತೆ ಗೊತ್ತಾಗಿ ಬಂದು ಅರೆಸ್ಟ್ ಮಾಡಿಕೊಂಡು ಹೋಗಿದ್ದರು. ವಾರದ ನಂತರ ನಾವು ಲೋಕಲ್ ಪೊಲೀಸ್ ಸ್ಟೇಶನ್ನಿಗೆ ಹೋದಾಗ ಅವರನ್ನು ಕೊಟ್ಟಾಯಂ ಎಸ್ಪಿ ಆಫೀಸಿಗೆ ಶಿಫ್ಟ್ ಮಾಡಿದರೆಂದು ಹೇಳಿದರು. ಕೊಟ್ಟಾಯಂಗೆ ಹೋದರೆ ಅಂಥ ಹೆಸರಿನವರೇ ಗೊತ್ತಿಲ್ಲವೆಂದು ಹೇಳಿದರು. ಅದಾದ ಮೂರು ತಿಂಗಳಿಗೆ ಅವರನ್ನು ಹುಡುಕಿಕೊಂಡು ಅವರ ತಂದೆ ಬಂದಿದ್ದರು. ಪಾಪ ಪ್ರೈಮರಿ ಸ್ಕೂಲ್ ಮಾಸ್ತರರಂತೆ. ಇಡೀ ಕೇರಳದ ಪೊಲೀಸ್ ಸ್ಟೇಶನ್ನುಗಳನ್ನೆಲ್ಲ ಅಲೆದಾಡಿದರು. ಆದರೆ ಮಗ ಮಾತ್ರ ಪತ್ತೆಯಾಗಲಿಲ್ಲ. ಉಳಿದಿದ್ದರೆ ಅಲ್ಲವೆ ಪತ್ತೆಯಾಗುವುದು. ಯಾವುದೋ ಪೊಲೀಸ್ ಸ್ಟೇಶನ್ನಿನಲ್ಲಿ ಹಿಂಸೆ ತಾಳಲಾರದೆ ಸತ್ತುಹೋಗಿದ್ದ. ಹೆಣವೂ ಸಿಗಲಿಲ್ಲ. ಅವರ ಅಪ್ಪನನ್ನು ನಮ್ಮ ಕೆ.ಎಮ್. ನಯ್ಯಾರ್ ಚೀಫ್ ಮಿನಿಸ್ಟರ್ ಹತ್ತಿರವೂ ಕರೆದುಕೊಂಡು ಹೋಗಿದ್ದರು. ಪ್ರಯೋಜನವಾಗಲಿಲ್ಲ. ಕಡೆಗೆ ಸುಪ್ರೀಂ ಕೋರ್ಟ್‌ಗೆ ಹೋಗ್ತೀನಿ ಅಂತ ಕಣ್ಣೀರು ಹಾಕಿಕೊಂಡೇ ಹೋದ್ರು ಇಲ್ಲಿಂದ. ಕಡೆಗೆ ಏನಾಯ್ತೋ ಏನೋ. ಏಕೋ ನೆನಪಾಯ್ತು' ಎಂದು ನಿಜವಾಗಿಯೂ ನಿಟ್ಟುಸಿರುಬಿಟ್ಟಿದ್ದರು ಮಾಧವನ್ ಪಿಳ್ಳೈ.

'ಎಮರ್ಜೆನ್ಸಿ ಟೈಮಿನಲ್ಲಿ ನಾನು ಮಿಡ್ಲ್ ಸ್ಕೂಲು ಎರಡನೇ ವರ್ಷದಲ್ಲಿ ಓದುತ್ತಿದ್ದೆ. ಹಾಗಾಗಿ ಆ ಕಾಲದ ಸಂಗತಿಗಳ ಪರಿಚಯ ಅಷ್ಟಾಗಿ ಇಲ್ಲ. ಆಗ ಪೊಲೀಸ್ ಅಟ್ರಾಸಿಟೀಸ್ ತುಂಬಾ ಆದವೆಂದು ಮಾತನಾಡಿಕೊಳ್ಳುವುದನ್ನು ಕೇಳಿದ್ದೀನಿ' ಹೇಳಿದ್ದೆ ನಾನು. 'ಅಪ್ಪನಿಗೆ ನೆನಪಿನ ಶಕ್ತಿ ತುಂಬಾನೇ ಇದೆ. ಆದ್ದರಿಂದಲೇ ಕೆ.ಎಮ್. ನಯ್ಯಾರ್ ಅಂಕಲ್‌ಗೆ ಅಪ್ಪ ಒಂಥರಾ ಡಿಜಿಟಲ್ ಡಯರಿ ಇದ್ದಂತೆ' ತನ್ನ ತಂದೆಯ ನೆನಪಿನ ಶಕ್ತಿಯ ಬಗ್ಗೆ ಹೆಮ್ಮೆಯಿಂದ ಹೇಳಿದ್ದಳು ಅರುಂಧತಿ ಪಿಳ್ಳೈ.

ಸಿಂಧು ಮೆನನ್ ಮಾತ್ರ ಏನೂ ಮಾತನಾಡದೆ ನಿಧಾನವಾಗಿ ಊಟ ಮಾಡುತ್ತಿದ್ದಳು. ತುತ್ತು ತುತ್ತಿಗೂ ಅವಳು ತನ್ನೆರಡು ಬೆರಳುಗಳನ್ನು ಬಾಯೊಳಗಿಟ್ಟುಕೊಳ್ಳುತ್ತಿದ್ದದ್ದು, ಬೆರಳುಗಳನ್ನು ತುಟಿಗಳಿಂದ ಸವರಿಕೊಳ್ಳುತ್ತಿದ್ದದ್ದು ಆಕರ್ಷಕವಾಗಿತ್ತು. ವೈನ್ ನಿಧಾನವಾಗಿ ಮತ್ತು ತರಿಸುತ್ತಿರುವಂತೆ ಅನ್ನಿಸಿತು ನನಗೆ. 'ನಿಮ್ಮ ಇಬ್ಬರು ಅಣ್ಣಂದಿರೂ ಸೀನಿಯರ್ ಐಪಿಎಸ್ ಆಫೀಸರ್‌ಗಳು ಅಂತ ಕಾಕಿಗಡ್ಡ ರಾಘವರೆಡ್ಡಿ ಹೇಳಿದ್ರು. ಇಬ್ಬರೂ ದಿಲ್ಲಿಯಲ್ಲಿ ಪವರ್‌ಫುಲ್ ಪೋಸ್ಟ್‌ನಲ್ಲಿ ಇದ್ದಾರಂತೆ. ನೀವೂ ಏಕೆ ಐಪಿಎಸ್ ಮಾಡಲಿಲ್ಲ?' ಎಂದು ಮಾಧವನ್ ಪಿಳ್ಳೈ ಕೇಳಿದಾಗ, ರಾಘವರೆಡ್ಡಿ ಚಾಚೂಬಿಡದೆ ನನ್ನ ಬಗ್ಗೆ ಹೇಳಿದ್ದಾನೆ ಅನ್ನಿಸಿತು. 'ನನಗೆ ಮೊದಲಿನಿಂದಲೂ ಸ್ವತಂತ್ರವಾಗಿ